**ದಿನಾಂಕಃ 14-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಎಸ್ ಎ ಕೆ ರವರಿಂದಃ**

8. ವಿಧವಾ ವೇತನಾ ಬಂದ್ ಮಾಡಿಸಲು ಎದುರುದಾರನು ಅರ್ಜಿ ನೀಡಿರುತ್ತಾನಾ ಎಂದರೆ ಸಾಕ್ಷಿಯು ನನ್ನನ್ನು ಮದುವೆಯಾದ ಮೇಲೆ ನಿನಗೆ ವಿದವಾ ವೇತನ ಏಕೆ ಬೇಕು ಎಂದು ಕೇಳಿ ಆತ ಅದನ್ನು ಬಂದ್ ಮಾಡಿಸಿರುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರ ನನ್ನ ವಿಧವಾ ವೇತನ ಬಂದ್ ಮಾಡಿಸಿದ್ದಾನೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನಾನು ಎದುರುದಾರನನ್ನು ಮದುವೆಯಾದಾಗಿನಿಂದ ವಿಧವಾ ವೇತನ ಬಂದ್ ಆಗಿದೆ. ನಾನು ಎದುರುದಾರನನ್ನು ಡಿಸೆಂಬರ್ 2016 ರಲ್ಲಿ ಮದುವೆಯಾಗಿದ್ದೇನೆ. ಈಗಲೂ ಸಹ ನಾನು ವಿಧವಾ ವೇತನ ಪಡೆಯುತ್ತಿಲ್ಲ. ನಾನು ಈಗಲೂ ಮುನೀರ್ ಅಹಮದ್ ಖಾಜಿ ಈತನ ವಿಧವೆ ಎಂದು ವಿಧವಾ ವೇತನ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ .ನಾನು ಎದುರುದಾರನನ್ನು ಮದುವೆಯಾಗಿದ್ದೇನೆ ಎಂದು ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಂದ ಜೀವನಾಂಶ ಪಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಎದುರುದಾರನ ಹೆಂಡತಿ ಅಲ್ಲ ಎಂದರೆ ಸರಿಯಲ್ಲ . ಎದುರುದಾರ ನನಗೆ ಯಾವುದೇ ಜೀವನಾಂಶ ನೀಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ .

9. ಎದುರುದಾರನಿಗೆ ಹೆಂಡತಿ ಹಾಗೂ 3 ಜನ ಮಕ್ಕಳು ಇದ್ದು, ಅವರನ್ನು ಸಾಕುವ ಜವಾಬ್ದಾರಿ ಇದೆ ಎಂದರೆ ನಿಜ ಸಾಕ್ಷಿಯು ಮುಂದುವರೆದು ನನ್ನನ್ನು ಸಾಕಬೇಕು ಎಂದು ನುಡಿಯುತ್ತಾರೆ. ನಾನು ಎದುರುದಾರನ ಹೆಂಡತಿಯಲ್ಲ, ಆತನೊಂದಿಗೆ ನಾನು ಯಾವುದೇ

ಸಂಬಂಧ ಹೊಂದಿಲ್ಲ ಆದ್ದರಿಂದ ಎದುರುದಾರ ನನಗೆ ಯಾವುದೇ ಜೀವನಾಂಶ ನೀಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ . ನಿಜ ಸಂಗತಿ ಗೊತ್ತಿದ್ದರೂ ಸಹ ಎದುರುದಾರನ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.